ತಾವು ಬಿಡುಗಡೆ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ? ಏಕೆಂದರೆ 461 ಮನೆಗಳು ಅಪೂರ್ಣವಾಗಿದೆ. ಬಹಳ ಮನೆಗಳಿಲ್ಲಾ ಈಗಾಗಲೇ ಬಿದ್ದುಹೋಗಿವೆ. ಎರಡನೆಯದಾಗಿ ಸರ್ಕಾರದ ಕಷ್ಟ ನಮಗೂ ಅರ್ಥವಾಗುತ್ತದೆ. ಏನೆಂದರೆ ಹುಡ್ಕೋದಿಂದ ಇನ್ನೂ ಹಣ ರಿಲೀಸ್ ಆಗಿಲ್ಲ. ಇದರಿಂದಾಗಿ ನಿಮಗೆ ಹಣ ಕೊಡುವುದಕ್ಕೆ ಬರುತ್ತಿಲ್ಲ. ನಾನು ಒಂದು ಸರ್ಕಾರಕ್ಕೆ ಸಲಹೆ ಕೊಡುವುದಕ್ಕೆ ಬಯಸುತ್ತೇನೆ. ಈ ಹಣ ಯಾವಾಗಲೂ ಹರಿಜನ ಬಂಧುಗಳಿಂದ ವಸೂಲು ಮಾಡುವುದಕ್ಕೆ ಸಾಧ್ಯವಿಲ್ಲದ ಕೆಲಸ ಇದು. ಎಲ್ಲಿಯವರೆಗೆ ನೀವು ವಸೂಲು ಮಾಡುವುದಿಲ್ಲ ಅಲ್ಲಿಯವರೆಗೆ ನೀವು ಫರ್ದರ್ ಅಸಿಸ್ಟೆನ್ಸ್ ಕೊಡುವುದಕ್ಕಾಗುವುದಿಲ್ಲ. ದಯಮಾಡಿ ಸರ್ಕಾರವೇ ಇದನ್ನು ಭರಿಸಿ ಅವರದು ವಜಾ ಮಾಡಿ ಸರ್ಕಾರ ಏನು ಹುಡ್ಕೋಗೆ ಹಣ ಕೊಡಬೇಕು ಆ ಹಣ ಕೊಟ್ಟು ಮುಂದೆ ಹೆಚ್ಚು ಹೆಚ್ಚು ಹಣ ಬರುವುದಕ್ಕೆ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಿಲ್ಲವೇ ಎಂಬುದು ನನ್ನ ಪ್ರಶ್ನೆ.

ಶ್ರೀ ಕೆ.ಹೆಚ್. ಪಾಟೀಲ್ : ನನ್ನವ್ವಕ್ಕೇ ಬಿಟ್ಟರೆ ನಿಮಗಿಂತ ಹೆಚ್ಚು ಸುದೀರ್ಘವಾಗಿ ನಾನು ಮಾಡಬಲ್ಲೆ. ಆದರೆ ಅದಕ್ಕೆ ಎಲ್ಲ ರೀತಿಯಿಂದ ಒಪ್ಪಿಗೆ ಸಿಗುವುದಿಲ್ಲ. ಈಗಿರುವ ಸ್ಥಿತಿಯಲ್ಲಿ ಹೇಳಬೇಕು ಎಂದರೆ ಒಟ್ಟು ನಮಗೆ ಕೊಡಬೇಕಾಗಿರುವುದು 17,97,525 ರೂಪಾಯಿಗಳು. ಅದರ ಪೈಕಿ ಈಗಾಗಲೇ ರಿಲೀಸ್ ಮಾಡಿರುವುದು 5 ಲಕ್ಷ 11 ಸಾವಿರದ 726 ರೂಪಾಯಿಗಳು. ಆದಷ್ಟೂ ಖರ್ಚಾಗಿದೆ. ಉಳಿದ ಹಣ ಖರ್ಚು ಮಾಡುವ ಸಲುವಾಗಿ ಹೌಸಿಂಗ್ ಬೋರ್ಡಿಗೆ ಬರೆದಿದ್ದೇವೆ. ಹೌಸಿಂಗ್ ಬೋರ್ಡಿನಿಂದ ಅಮೌಂಟ್ ರಿಲೀಸ್ ಆದಕೂಡಲೇ ಉಳಿದ ಹಣ ರಿಲೀಸ್ ಮಾಡಿ ಎಲ್ಲ ದುರಸ್ತಿ ಮಾಡುತ್ತಾರೆ. ನಿಮ್ಮ ಸಲಹೆ ಸರಿ ಇದೆ. ಅದು ನಾನು ಒಪ್ಪುತ್ತೇನೆ. ಆದರೆ ಸಲಹೆ ಪ್ರಕಾರ ಮಾಡಬೇಕಾದರೆ ಹೊಸದಾಗಿ ಕಟ್ಟುವಂಥ ಮನೆಗಳಾಗಲೀ ಅಥವಾ ಕಟ್ಟಿಸುತ್ತೇನೆ. ಎಂದು ನಾವು ಅನೌನ್ಸ್ ಮಾಡಿರುವ ಮನೆಗಳಾಗಲೀ ಸ್ವಲ್ಪ ದಿವಸ ಸ್ಥಗಿತಗೊಳಿಸಬೇಕಾಗುತ್ತದೆ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷಿಣಿಯವರೇ, ಬಹಳಷ್ಟು ಆಶ್ವಾಸನೆಗಳನ್ನು ಸರ್ಕಾರ ಕೊಟ್ಟಿದೆ. ನಿನ್ನೆ ತಾನೆ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವಾಗ ಬರುವ ಮಾರ್ಚ್‌ನೊಳಗೆ ಎರಡು ಲಕ್ಷ ಮನೆಗಳನ್ನು ಕಟ್ಟಿಸಿಬಿಡುತ್ತೇವೆ ಎಂದು ಹೇಳಿದ್ದಾರೆ ಡಿಮ್ಯಾಂಡ್ ಮೇಲೆ ಮಾತನಾಡುವಾಗ ನಾನು ಮಾತನಾಡುತ್ತೇನೆ. ಈ ಆಶ್ವಾಸನೆ ಕೊಡುವುದಕ್ಕೆ ಮೊದಲು ಎರಡು ಲಕ್ಷ ಮನೆ ಕಟ್ಟುವುದಕ್ಕೆ ಮೊದಲು ಬಿದ್ದುಹೋಗುತ್ತಿರುವ ಮನೆಗಳನ್ನಾದರೂ ಕಂಪ್ಲೀಟ್ ಮಾಡುತ್ತೀರಾ?

ಶ್ರೀ ಕೆ.ಹೆಚ್. ಪಾಟೀಲ್ : ಈ ಮನೆಯನ್ನು ಕಟ್ಟಿಸಬೇಕು ಮುಂದಿನ ಮನೆಯನ್ನು ಕಟ್ಟಿಸಬೇಕು. ಇದೆಲ್ಲಾ ಮುಂದೆ ಬರತಕ್ಕ ಹಣದ ವ್ಯವಸ್ಥೆ ನೋಡಿಕೊಂಡು ಮಾಡಬೇಕಾಗುತ್ತದೆ.

ಉಪಾಧ್ಯಕ್ಷರು : ಶ್ರೀಯುತ ರವೀಂದ್ರನಾಥ ಬಾಬು ಅವರೇ, ಈ ಪ್ರಶ್ನೆಗೆ ಟೈಮ್ ಕೇಳಿದ್ದಾರೆ. ಮುಂದೆ ತೆಗೆದುಕೊಳ್ಳುತ್ತೇನೆ.

ರಾಜ್ಯದಲ್ಲಿರುವ ಕೆರೆಗಳ ತೂಬು ಮತ್ತು ಕಾಲುವೆಗಳ ದುರಸ್ತಿ ಬಗ್ಗೆ.

2736-ಶ್ರೀ ಪಿ.ಜಿ.ಆರ್. ಸಿಂಧ್ಯ(ಕನಕಪುರ) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಭಾರಿ ಮತ್ತು ಮಧ್ಯಮ ಹಾಗೂ ಸಣ್ಣ ನೀರಾವರಿ ಯೋಜನೆಗಳ ಆಶ್ರಯದಲ್ಲಿ ಬರುವ ಕಾಲುವೆ, ತೂಬು ದುರಸ್ತಿ ಕೆಲಸಗಳು

ಸ್ಥಗಿತವಾಗಿದ್ದು ರೈತರಿಗೆ ಸರಿಯಾಗಿ ನೀರು ಸಿಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಇವುಗಳನ್ನು ದುರಸ್ತಿ ಮಾಡಲು ಸರಕಾರ ಹಾಕಿಕೊಂಡಿರುವ ಕಾರ್ಯಕ್ರಮಗಳೇನು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್(ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು):

ಅ) ಪುರಾತನ ಕಾಲುವೆ ನಾಲೆಗಳಲ್ಲಿ ಈ ರೀತಿಯ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ದುರಸ್ತಿ ಮಾಡಿಸಲು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಪ್ರಮುಖವಾದ ಪ್ರಶ್ನೆಯನ್ನು ನಾನು ಕಳೆದ ಸಾರಿ ಕೇಳಿದಾಗ ಸರ್ಕಾರ 15 ದಿವಸ ಕಾಲಾವಕಾಶ ಕೇಳಿತ್ತು. ಇದಕ್ಕೆ ಉತ್ತರ ಕೊಡುವ ಸಮಯದಲ್ಲಿ ಸಮಂಜಸ ಉತ್ತರ ಬರುತ್ತದೆಂದು ನಾನು ನಿರೀಕ್ಷೆ ಮಾಡಿದ್ದೆ. ರಾಜ್ಯದಲ್ಲಿ ಕಳೆದ 30-40 ವರ್ಷಗಳ ಹಿಂದೆ ಸಣ್ಣ ಮತ್ತು ಮಧ್ಯಮ ನೀರಾವರಿ ಯೋಜನೆ ಕೆಳಗೆ ಅನೇಕ ಕಾಲುವೆಗಳನ್ನು ನಿರ್ಮಾಣ ಮಾಡಿದ್ದು ಈಗ ಆ ಕಾಲುವೆಗಳಲ್ಲಿ ಸರಿಯಾಗಿ ನೀರು ಹರಿಯುತ್ತಿಲ್ಲ. ಕಳೆದ ಎರಡು ವರ್ಷಗಳಲ್ಲಿ ಯಾವುದೇ ಕಾಲುವೆಗಳ ರಿಪೇರಿಗೆ ಸರ್ಕಾರ ಹಣವನ್ನು ಬಿಡುಗಡೆ ಮಾಡಿಲ್ಲ. ಸುಮ್ಮನೆ ಅಷ್ಟು ಕೊಟ್ಟಿದ್ದೇವೆ, ಇಷ್ಟು ಕೊಟ್ಟಿದ್ದೇವೆನ್ನುತ್ತಾರೆಯೇ ಹೊರತು ಹಣ ಮಾತ್ರ ಹೋಗಿಲ್ಲ. ಮತ್ತೆ ಛೀಫ್ ಎಂಜಿನಿಯರ್ ಹತ್ತಿರ ಹೋದರೆ ಅವರಿಗೂ ಮುಜುಗರ ಪೇಳುವುದಕ್ಕೆ. ದುಡ್ಡು ಇಲ್ಲ ಎಂದು ಅವರು ಹೇಳುವುದಿಲ್ಲ. ದುಡ್ಡು ಬಿಡುಗಡೆ ಮಾಡಿಲ್ಲ ಎಂದು ಪೇಳುವುದಕ್ಕೆ ಅವರು ಹೋಗುವುದಿಲ್ಲ. ಇವತ್ತು ಒಂದೊಂದು ಸಬ್ ಡಿವಿಜನ್‌ಗೆ ಎರಡು ಲಕ್ಷ, 20 ಸಾವಿರ, 30 ಸಾವಿರ ರೂಪಾಯಿಗಳನ್ನು ಭಿಕ್ಷುಕರಿಗೆ ಕೊಟ್ಟಹಾಗೆ ರೈತರಿಗಾಗಿ ಕೊಡುತ್ತಿದ್ದೀರಿ. ಇದರಲ್ಲಿ ಯಾವ ಕಾಲುವೆಯನ್ನು ರಿಪೇರಿ ಮಾಡಿಸುತ್ತೀರಿ? ಇವತ್ತು ಜಲಾಶಯಗಳಲ್ಲಿ ನೀರು ನಿಂತಿದ್ದು ಕಾಲುವೆ ರಿಪೇರಿಯಾಗದೆ ರೈತರಿಗೆ ನೀರು ಸಿಗುವ ಸಂಭವ ಇಲ್ಲ. ಅಧಿಕಾರಿಗಳು ಬರೆದುಕೊಟ್ಟಿರುವಂತೆ "ದುರಸ್ತಿ ಮಾಡಿಸಲು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ" ಎನ್ನುವ ಉತ್ತರವನ್ನು ಕೊಟ್ಟಿದ್ದೀರಿ. ನಾನು 50 ಕಾಗದಗಳನ್ನು ಕೊಟ್ಟಿದ್ದೇನೆ. ಒಂದೂ ಕೆಲಸ ಆಗಿಲ್ಲ. ಮಾತೆತ್ತಿದರೆ ಹಣ ಇಲ್ಲ ಎಂದು ಹೇಳುತ್ತಾರೆ. ಪಾಪ, ಅಧಿಕಾರಿಗಳ ಮೇಲೆ ಏನು ಪೇಳುವುದು? ನಿಮ್ಮ ಸರ್ಕಾರದ ಖಜಾನೆ ಖಾಲಿ ಆಗಿದೆಯೆ? ನಿಮಗೂ ಮತ್ತು ಮುಖ್ಯಮಂತ್ರಿಗಳಿಗೂ ಸಂಬಂಧ ಸರಿಯಿಲ್ಲವೇ? ಅಥವಾ ನೀರಾವರಿ ಇಲಾಖೆಗೆ ಸರಿಯಾದ ಪ್ರಮಾಣದಲ್ಲಿ ಹಣ ಬಿಡುಗಡೆ ಮಾಡುತ್ತಿಲ್ಲವೇ? ಏನು ಕಾರಣ ಎಂದು ಹೇಳಿ ಅಥವಾ ಮಾಡುವುದಕ್ಕಾಗುವುದಿಲ್ಲವೆಂದಾದರೂ ಪೇಳಿ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ಉಪನಾಯಕರು ಸಂಬಂಧ ಇಲ್ಲದೇ ಎಲ್ಲಿಗೋ ಹೋಗುತ್ತಾರೆ. ಇಲ್ಲಿ ವಿಷಯ ಕಾಲುವೆ ಮತ್ತು ಡ್ಯಾಮ್‌ಗೆ ಸಂಬಂಧಪಟ್ಟದ್ದು. ಮಾನ್ಯ ಮುಖ್ಯಮಂತ್ರಿಗಳಿಗೂ ನನಗೂ ಸಂಬಂಧ ಚೆನ್ನಾಗಿದೆ. ಇದರ ಬಗ್ಗೆ ಯಾರೂ ತಪ್ಪು ಅಭಿಪ್ರಾಯಪಡುವುದು ಬೇಡ. ಕಾಲುವೆ ಮತ್ತು ಡ್ಯಾಮ್‌ಗೆ ಸಂಬಂಧಪಟ್ಟಹಾಗೆ ವಿರೋಧಪಕ್ಷದ ಉಪನಾಯಕರು ಏನು ಪತ್ರಗಳನ್ನು ಕೊಟ್ಟಿದ್ದಾರೋ ತ ಒಂದೂ ಪತ್ರಗಳನ್ನು ನಾನು ನೋಡಿಲ್ಲ.

ಅವರಲ್ಲಿ ಯಾವುದಾದರೂ ಬೇಡಿಕೆಗಳು ಇದ್ದರೆ, ಇಂತಹ ಕಡೆ ಇಂತಹ ಕೆಲಸ ನಿಂತಿದೆ ಎಂದು ತಿಳಿಸಿದರೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ. ನಾನು ಎಲ್ಲಾ ಕಡೆಯಿಂದ ಮಾಹಿತಿಯನ್ನು ತರಿಸಿಕೊಂಡಿದ್ದೇನೆ. ಎಲ್ಲಿ ಕೆಲಸ ನಿಂತಿದೆ ಅಲ್ಲಿ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ. ಇವತ್ತು ಕೆಲವು ಮೇಜರ್ ಪ್ರಾಜೆಕ್ಟ್‌ಗಳಲ್ಲಿ ಲ್ಯಾಂಡ್ ಅಕ್ವಿಜಿಷನ್ ಪ್ರಾಬ್ಲಮ್ ಬಂದಿರುತ್ತದೆ. ಎಲ್ಲಿ ಕೆನಾಲ್ ಕೆಲಸ ಆಗಿಲ್ಲವೆಂದು ಅವರು ನನ್ನ ಗಮನಕ್ಕೆ ತಂದರೆ....

ಶ್ರೀ ಪಿ.ಜಿ. ಆರ್. ಸಿಂಧ್ಯ : ಮಾನ್ಯ ಮಂತ್ರಿಗಳು ನನ್ನ ಪ್ರಶ್ನೆಯನ್ನು ಅರ್ಥಮಾಡಿಕೊಂಡಿಲ್ಲ. ಹೊಸದಾಗಿ ಜಾಗವನ್ನು ಅಕ್ವೈರ್ ಮಾಡುವ ಪ್ರಶ್ನೆ ಅಲ್ಲ. ಎಲ್ಲಿ ಸಣ್ಣ ಮತ್ತು ಮಧ್ಯಮ ನೀರಾವರಿ ಅಡಿಯಲ್ಲಿ ಕೆರೆಗಳು ಆಗಿವೆ ಅವುಗಳ ತೂಬನ್ನು ರಿಪೇರಿ ಮಾಡುವುದಕ್ಕೆ ಹಣ ಇಲ್ಲ. ಇವತ್ತು ಕಾಲುವೆಯಲ್ಲಿ ತುಂಬಿರುವ ಹೂಳನ್ನು ಎತ್ತಿ ಹಾಕುವುದಕ್ಕೆ ಹುಲ್ಲು ಕೂಯುವುದಕ್ಕೆ ಇಲಾಖೆಯವರನ್ನು ಕೇಳಿದರೆ ಇಲ್ಲ ಎಂದು ಹೇಳುತ್ತಿದ್ದಾರೆ. ಕಾಗದ ಬರೆದಿದ್ದೇನೆಂದರೆ ನಿಮಗೆ ಅಂತ ಅಲ್ಲ, ಇಲಾಖೆಗೆ ನಾನು ಇಲ್ಲ ಎಂದು ಹೇಳುತ್ತಿದ್ದಾರೆ. ಕಾಗದ ಬರೆದಿದ್ದೇನೆಂದರೆ, ನಿಮಗೆ ಅಂತ ಅಲ್ಲ, ಇಲಾಕೆಗೆ ನಾನು ಕಾಗದ ಬರೆದಿದ್ದೇನೆ. ನನ್ನ ಕ್ಷೇತ್ರದ ಬಗ್ಗೆ ನಾನು ಕೇಳುತ್ತಿಲ್ಲ. ಇಡೀ ರಾಜ್ಯದಲ್ಲಿ ನೀರಾವರಿ ಇಲಾಖೆಯಡಿ ಬರುವ ಕೆರೆಗಳ ತೂಬು ರಿಪೇರಿಗೆ ಕೊಟ್ಟಿರುವ ಹಮ ಬಹಳ ಕಡಿಮೆ ಇದೆ. ಇದನ್ನು ಹೆಚ್ಚುಮಾಡುವ ಬಗ್ಗೆ ಭರವಸೆ ಕೊಡಿ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ವಿರೋಧಪಕ್ಷದ ಉಪನಾಯಕರು ಕೂಡಾ ಹಿಂದೆ ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ. ಅವರೂ ಕೂಡಾ ಉತ್ತರ ಕೊಡುವಾಗ ನನ್ನ ರೀತಿಯಲ್ಲಿ ಉತ್ತರ ಕೊಟ್ಟಿದ್ದಾರೆಂದು ನಾನು ಅಂದುಕೊಂಡಿದ್ದೇನೆ. ಆದರೆ, ಅಧಿಕಾರಿಗಳು ಏನು ಬರೆದುಕೊಡುತ್ತಾರೋ ಅದನ್ನು ಹೇಳುವುದು ಈ ಸದನದಲ್ಲಿ ಒಂದು ಪರಿಪಾಠ ಬೆಳೆದು ಬಂದಿದೆ. ಅವರ ಅನಿಸಿಕೆಯನ್ನು ನಾವು ಒಪ್ಪುತ್ತೇವೆ. ಕೆಲವು ಕಡೆ ನಾವು ನೇರವಾಗಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಆ ದೃಷ್ಟಿಯಿಂದ ನಾನು ಕಾರ್ಯಕ್ರಮ ತೆಗೆದುಕೊಳ್ಳುವುದರಲ್ಲಿ ಹಿಂದೆಮುಂದೆ ನೋಡುವುದಿಲ್ಲ. ಆದರೆ ಯಾರೋ ಅಧಿಕಾರಿ ಹಣ ಇಲ್ಲ ಎಂದು ಹೇಳಿಬಿಟ್ಟರು ಎಂದು ಹೇಳಿದರು. ಆ ಅಧಿಕಾರಿಯ ಹೆಸರನ್ನು ಹೇಳಿದರೆ ಆ ಅಧಿಕಾರಿಯ ಮೇಲೆ ನಾವು ಯೋಗ್ಯವಾದ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುತ್ತೇನೆ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಈಗ ನಾನು ಹೆಸರನ್ನು ಕೊಡುತ್ತೇನೆ. ಆದರೆ ತಾವು ಈಗಾಗಲೇ ಅವರನ್ನು ಸಸ್ಪೆಂಡ್ ಮಾಡಿದ್ದೀರಿ. ಇನ್ನೇನು ಕ್ರಮವನ್ನು ಅವರ ಮೇಲೆ ತಾವು ತೆಗೆದುಕೊಳ್ಳುವುದಕ್ಕೆ ಸಾಧ್ಯ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಅವರು ಒಳ್ಳೆಯ ಕೆಲಸ ಮಾಡಿಲ್ಲ ಎಂದ ಮೇಲೆ ಅವರ ಮೇಲೆ ಈಗಾಗಲೇ ಕ್ರಮ ತೆಗೆದುಕೊಂಡಿರುವುದನ್ನು ತಾವೇ ಒಪ್ಪುತ್ತೀರಿ ಅಲ್ಲವೇ?

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಮಂತ್ರಿಗಳು ಮಾತನಾಡುತ್ತಾ ಮುಖ್ಯಮಂತ್ರಿಗಳು ಹಾಗೂ ಅವರ ಸಂಬಂಧ ಚೆನ್ನಾಗಿದೆ ಎಂದು ಹೇಳಿದರು. ದರೆ ನಮಗೆ ಬೇಕಾಗಿರತಕ್ಕದ್ದು ಅವರ ಮತ್ತು ನೀರಾವರಿ ಸಂಬಂಧ ಹೇಗೆ ಇದೆ ಎಂಬುದು? ನೀರಾವರಿ ಸಂಬಂಧ ಚೆನ್ನಾಗಿದೆ ಎಂದು ಹೇಳುವುದಾದರೆ ಈ ಉತ್ತರವನ್ನು ನಾವು ನಿರೀಕ್ಷೆ ಮಾಡುವುದಕ್ಕಾಗುವುದಿಲ್ಲ. ಇವತ್ತು ನಮ್ಮ ರಾಜ್ಯದಲ್ಲಿ

ಸುಮಾರು 25 ಸಾವಿರದಷ್ಟು ಸಣ್ಣ ಕೆರೆಗಳು ಇವೆ. ಇವುಗಳು ಇವತ್ತು ಜಿಲ್ಲಾಪರಿಷತ್ತಿನ ವ್ಯಾಪ್ತಿಗೆ ಬರುತ್ತವೆ.

12.00 ಪಿ.ಎಂ.

ಈ ಸಾರಿಯಂತೂ ವಿಪರೀತ ಮಳೆಯಿಂದಾಗಿ ಅನೇಕ ಕೆರೆಗಳು ಒಡೆದುಹೋಗಿವೆ. ಅದು ಬೇರೆ ವಿಚಾರ. ಆದರೆ ದುರಸ್ಥಿ ಕಾರ್ಯಕ್ಕಾಗಿ ನೀವು ನಿಗದಿತವಾಗಿ ವಿಶೇಷವಾಗಿ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ? ಇದಕ್ಕಾಗಿ ವಿಶೇಷ ಹಣ ಏನು ಒದಗಿಸಿದ್ದೀರಿ? ಏಕೆಂದರೆ ಇಲ್ಲಿ ಹೇಳಿದ್ದೀರಿ. ದುರಸ್ತಿ ಮಾಡಲು ಎಲ್ಲ ಕ್ರಮವನ್ನು ತೆಗೆದುಕೊಳ್ಳಲಾಗಿದೆ ಎಂದು. ಎಲ್ಲ ಕ್ರಮಗಳು ಎಂದರೆ, ನಮಗೆ ಬೇಕಾಗಿರುವುದು, ದುಡ್ಡು ಎಷ್ಟು ಇಟ್ಟಿದ್ದೀರಿ? ದುರಸ್ತಿ ಕಾರ್ಯಕ್ಕಾಗಿ ಅಷ್ಟು ಹಣ ನಿಗದಿ ಮಾಡಿದ್ದೀರಿ? ಎಷ್ಟು ಹಣ ಖರ್ಚಾಗಿದೆ? ಪೂರ್ತಿಯಾಗಿ ಎಂದರೆ ಯೋಜನೆಯ ರೂಪುರೇಷೆಗಳು ಏನಾದರೂ ಇದ್ದರೆ ಕೊಡುತ್ತೀರಾ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷಣಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ನೀರಾವರಿ ಮಂತ್ರಿಯಾಗಿ ಕೆಲಸ ಮಾಡಿದ್ದಾರೆ. ಅದು ನನಗೆ ಗೊತ್ತಿದೆ. ಅವರಿಗೆ ಇರತಕ್ಕಂಥ ಅನುಭವವನ್ನು ನಾನು ಇನ್ನೂ ಪಡೆದಿಲ್ಲ. ಅದನ್ನು ನಾನು ಇಲ್ಲಿ ಹೇಳಬೇಕಾಗುತ್ತದೆ. ಇನ್ನು ನನಗೆ ಸಮಯದ ಅಭಾವ ಇದೆ, ನಾನು ಈ ಸ್ಥಾನಕ್ಕೆ ಬಂದು ಒಂದು ತಿಂಗಳಾಗಿದೆ. ಇದನ್ನು ಸರಿಮಾಡುವುದಕ್ಕೆ ನಾನು ಆದಷ್ಟು ಮಟ್ಟಿಗೆ ಪ್ರಯತ್ನ ಮಾಡುತ್ತಿದ್ದೇನೆ. ಡಿಮಾಂಡ್ಸ್ ಬಗ್ಗೆ ಉತ್ತರ ಕೊಡುವ ಕಾಲಕ್ಕೆ ಎಷ್ಟು ಹಣಕಾಸಿನ ವ್ಯವಸ್ಥೆ ಮಾಡಿದ್ದೇವೆ ಎಂದು ನಾನು ನೇರವಾಗಿ ಉತ್ತರ ಕೊಡುತ್ತೇನೆ. ಈ ಕಾರ್ಯಕ್ರಮ ಅಂತೂ ತೆಗೆದುಕೊಳ್ಳುತ್ತೇನೆ ಎಂದು ಹೇಳುತ್ತೇನೆ.

ಉಪಾಧ್ಯಕ್ಷರು ; ಒಬ್ಬೊಬ್ಬರಾಗಿ ಮಾತನಾಡಿ.

ಶ್ರೀ ಶಿವಾನಂದ ಎಚ್. ಕೌಜಲಗಿ : ನಮ್ಮ ಬೆಳಗಾವಿ ತಾಲ್ಲೂಕಿನಲ್ಲಿ ಕೂಡ ಒಂದೂ ಕೆನಾಲ್ ರಿಪೇರಿ ಆಗಿಲ್ಲ ಒಂದೂ ರೋಡ್ ರಿಪೇರಿ ಆಗಿಲ್ಲ. ಇಲ್ಲಿ ಒಂದು ಶಾಲೆ ರಿಪೇರಿ ಆಗುವುದಿಲ್ಲ, ಶಾಲೆ ಇಲ್ಲ, ದವಾಖಾನೆ ಇಲ್ಲ.....

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಉಪಾಧ್ಯಕ್ಷಣಿಯವರೇ, ಇದಕ್ಕೆ ನಾನು ಉತ್ತರ ಹೇಳಬೇಕು ಎಂದರೆ, ಈಗ ನಮ್ಮ ಮುಂದಿನ ಸಾಲಿನಲ್ಲಿರುವಂಥವರು ಹಿಂದೆ ಮಂತ್ರಿಗಳಾಗಿದ್ದವರು ಅವರಿಗೆ ಇದೇ ಪ್ರಶ್ನೆಯನ್ನು ಹಾಕಿದ್ರಿ ಇದು ಜಿಲ್ಲಾ ಪರಿಷತ್ ವ್ಯಾಪ್ತಿಗೆ ಬರುತ್ತದೆ, ನಾವು ಉತ್ತರ ಕೊಡುವುದಿಲ್ಲ ಎಂದು ಹೇಳಿದ್ದರು. ಜಿಲ್ಲಾಬರತಕ್ಕಂಥ ಪ್ರಶ್ನೆಯನ್ನು ಇಲ್ಲಿ ಹಾಕಿದರೆ ನಾವು ಏನಾದರೂ ಉತ್ತರ ಕೊಡುವುದಕ್ಕೆ ಆಗುತ್ತದೆಯೇ? ನೇರವಾಗಿ ಪ್ರಶ್ನೆ ಕೇಳಲಿ, ನಾನು ಉತ್ತರ ಕೊಡುತ್ತೇನೆ.

(ಗೊಂದಲ)

ಶ್ರೀ ಶಿವಾನಂದ ಎಚ್. ಕೌಜಲಗಿ : ಬೆಳಗಾವಿಯಲ್ಲಿ ಚೀಫ್ ಇಂಜನಿಯರ್ ಅವರ ಆಫೀಸ್ ಇದೆಯಾ?

(ಗೊಂದಲ)

ಶ್ರೀ ಬಿ.ಎಚ್. ಬನ್ನಿಕೋಡ್ : ಮಾನ್ಯ ಸಚಿವರಿಗೆ ಇರತಕ್ಕಂಥ ಕಳಕಳಿಯನ್ನು ನಾವು ಪ್ರಶ್ನೆ ಮಾಡುತ್ತಿಲ್ಲ. ರಾಜ್ಯದಲ್ಲಿ ಎಲ್ಲ ಕರೆಕಟ್ಟಿಗಳು ತುಂಬಿವೆ, ಜಲಾನಯನ ಪ್ರದೇಶಗಳು ತುಂಬಿವೆ. ಇರತಕ್ಕಂಥ ನೀರನ್ನು ಉಪಯೋಗಿಸಿಕೊಳ್ಳಲಿಕ್ಕೆ ಆಗುತ್ತಿಲ್ಲ. ಹೂಳು ತೆಗೆಯುವ ವ್ಯವಸ್ಥೆ ಮಾಡುವುದಕ್ಕೆ ಸರ್ಕಾರ ಎಷ್ಟು ಖರ್ಚು ಮಾಡಿದೆ?

ಎಷ್ಟು ಹಣದ ಅವಶ್ಯಕತೆ ಇದೆಯೆಂದು ಹೇಳಿ ಎಂದರೆ, ಮಾನ್ಯ ಸಚಿವರು ವಿವರ ಕೊಡುತ್ತಿಲ್ಲ. ನನಗೆ ಗೊತ್ತು, ಈ ಸದನದಲ್ಲಿ ಇರತಕ್ಕಂಥ ಸದಸ್ಯರಿಗೆ ಗೊತ್ತು. ಇವತ್ತು ಯಾವುದೇ ಕಛೇರಿಗೆ ಹೋಗಿ ಕೇಳಲಿ, ಹಣ ಇಲ್ಲವೆಂದು ಹೇಳುತ್ತಾರೆ. ಇವತ್ತು ರೈತರು ಕಂಗಾಲಾಗಿದ್ದಾರೆ. ಅಲ್ಲಿ ಭತ್ತದ ನಾಟಿಗೆ ತಯಾರು ಮಾಡಿಕೊಂಡಿದ್ದಾರೆ. ಕೆರೆಯಿಂದ ನೀರು ಅವರ ಜಮೀನಿಗೆ ಬರಲಿಕ್ಕೆ ಬೇಕಾದ ಕಾರ್ಯಗಳನ್ನು ಮಾಡುವುದಕ್ಕೆ ಹಣ ಇಲ್ಲ. ಇದು ರಾಜಕೀಯದ ಪ್ರಶ್ನೆ ಅಲ್ಲ. ತಾವು ತ್ವರಿತವಾಗಿ ಅಧಿಕಾರಿಗಳ ಸಭೆ ಕರೆದು ಹಣ ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ? ಇರತಕ್ಕಂಥ ನೀರನ್ನು ರೈತರಿಗೆ ಕೊಟ್ಟು, ರಾಜ್ಯದ ನೀರಾವರಿ ಇಲಾಖೆಯತ್ತ ತೀವ್ರ ಗಮನಪರಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ವೆಂಕಟೇಶ್ : ಮಾನ್ಯ ಉಪನಾಯಕರು ಕೇಳಿರತಕ್ಕಂಥಾದ್ದು ನಿಜ. ನನ್ನ ಕ್ಷೇತ್ರದಲ್ಲಿ ಹಲವಾರು ಕೆರೆಗಳು ಒಡೆದುಹೋಗಿವೆ. ನಾವು ಅಧಿಕಾರಿಗಳನ್ನು ಕೇಳಿದರೆ ನಮ್ಮಲ್ಲಿ ಹಣ ಇಲ್ಲವೆಂಬ ಮಾತನ್ನು ಹೇಳುತ್ತಾರೆ. ಇವತ್ತು ಎಷ್ಟೋ ಕೆರೆಗಳನ್ನು ಬಾರ್ಡರ್ ಏರಿಯಾ ಡೆವಲಪ್‌ಮೆಂಟ್‌ನಿಂದ ರಿಪೇರಿ ಮಾಡಿಸುವುದಕ್ಕೆ ಪ್ರಯತ್ನ ಮಾಡಿದ್ದೀರಿ. ಮನ್ಯ ಉಪನಾಯಕರು ಹೇಳಿದ್ದು ಏನೆಂದರೆ ತಮಗೆ ರೈತರ ಬಗ್ಗೆ ವಿಶ್ವಾಸ ಇದೆ. ಆದರೆ ಇನ್ನೂ ಹೆಚ್ಚಿಗೆ ಬರಗಾಲ ಬಂದು ಮಳೆ ಹೆಚ್ಚಿಗೆ ಆಗಿ ಕೆರೆಗಳು ಒಡೆದುಹೋದರೆ ಕಷ್ಟ. ಆದ್ದರಿಂದ ಕೂಡಲೇ ಹೆಚ್ಚು ಹಣ ಬಿಡುಗಡೆ ಮಾಡಿ ಕೆಲಸಗಳನ್ನು ಕೈಗೊಳ್ಳಬೇಕೆಂದು ಹೇಳುತ್ತೇನೆ. ಈಗ ನಮ್ಮ ಮೈಸೂರಿನಲ್ಲಿ ಸರ್ಕಾರದಿಂದ ಹಣ ಕೊಟ್ಟರೂ ಕೂಡ ಚೀಫ್ ಇಂಜಿನಿಯರ್ ಅವರು ಡಿವಿಜನ್‌ಗಳಿಗೆ ಹಣ ಕೊಡುವುದೇ ಇಲ್ಲ. ಯಾರು ಅವರಿಗೆ ಬೇಕಾಗಿರುತ್ತಾರೆ ಅವರವರಿಗೆ ಸಂಬಂಧ ಚೆನ್ನಾಗಿ ಇದ್ದರೆ ಮಾತ್ರ ಹಣ ಕೊಡುತ್ತಾರೆ. ಈ ರೀತಿಯಾದ ದುರುಪಯೋಗದಿಂದ ಕೆಲಸ ಕಾರ್ಯಗಳು ಸ್ಥಗಿತವಾಗುತ್ತಿವೆ. ಚೀಫ್ ಇಂಜಿನಿಯರ್ ಅವರಿಗೆ ತಾವು ಆದೇಶ ಕೊಡಬೇಕು, ಎಲ್ಲ ಜಿಲ್ಲೆಗಳಿಗೆ ಸರಿಸಮಾನವಾಗಿ ಹಣ ಪಂಚಬೇಕು ಎಂದು. ತಮ್ಮ ನೀರಾವರಿ ಇಲಾಖೆಯಲ್ಲಿ ಚೀಫ್ ಇಂಜಿನಿಯರ್ ಏನು ಇದ್ದರು ಅವರಿಗೆ ರಜೆಹಾಕಿ ಅಂತ ಹೇಳಿ ಕಳಿಸಿಕೊಟ್ಟಿದ್ದಾರೆ. ಅವರು ದುರುಪಯೋಗ ಮಾಡಿರುವ ಕೆಲಸಗಳಿಗಾಗಿ ರಜೆ ಹಾಕಿ ಹೊರಟುಹೋಗಿ ಎಂದು ಹೇಳಿದ್ದಾರೆ. ಅವರು ಬೇಕಾದವರಿಗೆ ಮಾತ್ರ ಹಣ ಕೊಡುವುದು. ಇಲ್ಲದಿದ್ದರೆ ಕೊಡುವುದೇ ಇಲ್ಲ...

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ನಾನು ಈಗಾಗಲೇ ಹೇಳಿದ್ದೇನೆ. ಡಿಮಾಂಡ್ಸ್ ಮೇಲೆ ಉತ್ತರ ಕೊಡುವ ಕಾಲಕ್ಕೆ ವಿವರವಾಗಿ ಉತ್ತರ ಕೊಡುತ್ತೇನೆ ಎಂದು. ಈಗ ಆ ವಿವರಗಳು ನನ್ನ ಕಡೆಗೆ ಇಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ಉಪನಾಯಕರು ಅದನ್ನು ಒಪ್ಪಿಕೊಳ್ಳುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯ ಬನ್ನಿಕೋಡ್ ಅವರು ಏನು ಹೇಳಿದ್ದಾರೆ, ಅದೇ ರೀತಿಯಾಗಿ ಕೆಲವು ಕೆರೆಗಳಿಗೆ ನೀರು ಬಂದಿದೆ. ಆ ದಿಸೆಯಲ್ಲಿ ನಾವು ಕಾರ್ಯಕ್ರಮಗಳನ್ನು ಹಮ್ಮಿಕ್ಕೊಳ್ಳುತ್ತೇವೆ ಎಂದು ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತೇನೆ.

ಉಪಾಧ್ಯಕ್ಷರು : ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು.

ಶ್ರೀ ವಾಟಾಳ್ ನಾಗರಾಜ್ : ಪ್ರವಾಹಪೀಡಿತ ಪ್ರದೇಶಗಳಾದ ಮಂಡ್ಯ, ಮೈಸೂರು ಮತ್ತು ಹಾಸನ ಜಿಲ್ಲೆಗಳ ಬಗ್ಗೆ ಈ ಸಭೆಯಲ್ಲಿ ಅನೇಕಸಾರಿ ಹೇಳಿದ್ದೇವೆ. ಇದುವರೆಗೂ ಸರ್ಕಾರದವರು ಸರಿಯಾದ ಪರಿಹಾರ ಕೊಟ್ಟಿಲ್ಲ. ಸರ್ಕಾರದವರು ಇದರ ಬಗ್ಗೆ ಏನು ಹೇಳುತ್ತಾರೆ. ನಿನ್ನೆ ಮೊನ್ನೆ ಚಾಮರಾಜನಗರದಲ್ಲಿ ಮಳೆಯಿಂದ ಪ್ರವಾಹ

ಬಂದು ಮನೆಗಳು ಕೊಚ್ಚಿಕೊಂಡು ಹೋಗಿವೆ. ಈ ಬಗ್ಗೆ ಸರ್ಕಾರದವರು ಏನಾದರೂ ಹೇಳಬೇಕು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು.

ಬಸರಾಳು ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ

3062 - ಶ್ರೀ ಎಸ್. ತಮ್ಮಣ್ಣ (ಕೆರಗೋಡು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸರಾಳು ಗ್ರಾಮದಲ್ಲಿ ಕುಡಿಯುವ ನೀರಿನ ಕೊರತೆ ಇದೆಯೆ?

ಆ) ಹಾಗಿದ್ದಲ್ಲಿ ಈ ಕೊರತೆಯನ್ನು ನೀಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? ಹಾಗೂ ಈ ಕೊರತೆಯನ್ನು ಎಂದಿನಿಂದ ನೀಗಿಸಲಾಗುವುದು?

ಶ್ರೀ ಕೆ.ಜೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಇದೆ.

ಆ) ಈವರೆವಿಗೂ ಒಟ್ಟು 14 ಕೊಳವೆ ಬಾವಿಗಳಿಗೆ ಕೈಪಂಪು ಅಳವಡಿಸಲಾಗಿದೆ. ಒಂದು ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಯೋಜನೆ ಮಂಜೂರಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿದೆ. ಅದು ಪೂರ್ಣವಾದ ನಂತರ ನೀರಿನ ಬವಣೆಯು ಕಡಿಮೆಯಾಗುತ್ತದೆ.

ಯಕ್ಷಗಾನದ ಅಭಿವೃದ್ಧಿ

3089-ಶ್ರೀ ಬಿ.ರಮಾನಾಥ ರೈ (ಬಂಟ್ವಾಳ) : ಮಾನ್ಯ ಯುವಜನ ಸೇವೆ ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಶ್ರೀಮಂತ ಕಲೆಯಾದ ಯಕ್ಷಗಾನದ ಅಭಿವೃದ್ಧಿಗೆ ಪ್ರತ್ಯೇಕ ಅಕಾಡೆಮಿಯೊಂದನ್ನು ಸ್ಥಾಪಿಸಲು ಸರ್ಕಾರ ಮುಂದೆ ಬರಬಹುದೇ.

ಆ) ಯಕ್ಷಗಾನಕ್ಕೆ ಪ್ರತ್ಯೇಕ ಅಕಾಡೆಮಿ ಮಾಡುವುದರಿಂದ ಕಲೆಯ ಅಭಿವೃದ್ಧಿಗೆ ಸಹಾಯವಾಗಬಹುದಲ್ಲವೆ.

ಇ) ಹಾಗಿದ್ದಲ್ಲಿ ಎಂದಿನಿಂದ ಮಾಡಲಾಗುವುದು.

ಶ್ರೀ ಎಸ್. ರಮೇಶ್ (ಯುವಜನ ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಸಚಿವರು)

ಅ) ಇಲ್ಲ.

ಆ) ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಮೂಲಕವೇ ಈ ಕಲೆ ಅಭಿವೃದ್ಧಿ ಪಡಿಸಲು ಸಾಕಷ್ಟು ಅವಕಾಶವಿದೆ. ಪ್ರತ್ಯೇಕ ಅಕಾಡೆಮಿಯ ಅವಶ್ಯಕತೆ ಇಲ್ಲ.

ಇ) ಉದ್ಭವಿಸುವುದಿಲ್ಲ.